MAHESH B T
Authentication purpose
Digitally signed by MAHESH B T
Location: Ramanagara
Date: 2024.04.16 15:43:28 +0530

KARN020012072023

# 1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ, ರಾಮನಗರ.

**:ಉಪಸ್ಥಿತರು :**

**ಶ್ರೀ ಮಹೇಶ್ ಬಿ.ಟಿ.** ಬಿ.ಕಾಂ., ಎಲ್.ಎಲ್.ಎಂ.,
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರಾಮನಗರ.**

**ದಿನಾಂಕ:**
**15 ನೇ ಏಪ್ರಿಲ್ 2024**

ಅಸಲು ದಾವಾ ಸಂಖ್ಯೆ:**422/2023**

ವಾದಿ/ಯರು : ಶ್ರೀ.ಆರ್.ರಾಮಯ್ಯ

**-ವಿರುದ್ಧ-**

ಪ್ರತಿವಾದಿ/ಯರು : ಶ್ರೀಮತಿ.ಲಕ್ಷ್ಮಮ್ಮ ಇತರರು.

ಮಧ್ಯಂತರ ಅರ್ಜಿ-**1** ರ ಪಕ್ಷಕಾರರು

ಅರ್ಜಿದಾರರು : ಶ್ರೀ.ಆರ್.ರಾಮಯ್ಯ
-- (ವಾದಿ)

-ವಿರುದ್ಧ-

ಎದುರುದಾರರು : ಶ್ರೀ ಡಿ. ನಾಗರಾಜು
-(ಪ್ರತಿವಾದಿ ಸಂಖ್ಯೆ.5)

***

**<u>ವಾದಿರವರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-1 ಕ್ರಮಾದೇಶ 39 ನಿಯಮ 1 ಮತ್ತು 2 ರ ಸಹವಾಚಕ ಸಿವಿಲ್ ಪ್ರಕ್ರಿಯಾ ಸಂಹಿತೆ 151 ಮೇಲೆ ಆದೇಶ</u>**

ವಾದಿಯು ಪ್ರಸ್ತುತ ಮಧ್ಯಂತರ ಅರ್ಜಿಯನ್ನು ಪ್ರತಿವಾದಿ ಸಂಖ್ಯೆ.5 ಅಥವಾ ಇವರ ಪ್ರತಿನಿಧಿಯಾಗಲೀ, ಇವರ ಏಜೆಂಟರುಗಳಾಗಲೀ, ಇವರ ಹಿಂಬಾಲಕರುಗಳಾಗಲೀ ಹಾಗೂ ಇತರೆ ಬೇರೆ ಯಾರದರೂ ಸಹ ಈ ದಾವೆಯು ಇತ್ಯರ್ಥವಾಗುವವರೆವಿಗೂ ಸದರಿ ದಾವಾ ಷೆಡ್ಯೂಲ್‌ಸ್ವತ್ತನ್ನು ಬೇರೆ ಯಾರಿಗೂ ಮಾರಾಟ ಮಾಡದಂತೆ ತಾತ್ಕಾಲಿಕ ತಡೆಯಾಜ್ಞೆ ನೀಡಬೇಕೆಂದು ಕೋರಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

<u>2. ಅರ್ಜಿಯ ಸಂಕ್ಷಿಪ್ತ ಸಾರಾಂಶವು ಈ ಕೆಳಗಿನಂತಿದೆ:</u>

ಅರ್ಜಿದಾರರು/ವಾದಿಯರು ತಮ್ಮ ಪ್ರಮಾಣ ಪತ್ರದಲ್ಲಿ ಪ್ರಮಾಣೀಕರಿಸಿರುವಂತೆ, ಪ್ರತಿವಾದಿಗಳ ವಿರುದ್ಧ ಈ ದಾವೆಯನ್ನು ದಾವಾ ಸ್ವತ್ತುಗಳಲ್ಲಿ ಭಾಗಾಂಶ, ಪ್ರತ್ಯೇಕ ಸ್ವಾಧಿನತೆ ಮತ್ತು ಇತರೆ ಪರಿಹಾರ ಕೋರಿ ದಾವೆ ಸಲ್ಲಿಸಿದ್ದು, ವಾದಿ ಮತ್ತು ಪ್ರತಿವಾದಿ ಸಂಖ್ಯೆ.1 ರಿಂದ 5 ರವರ ಕುಟುಂಬದ ಮೂಲ ಕರ್ತ ರಂಗಸ್ವಾಮಯ್ಯ ಉ: ಮರುಡಪ್ಪ ಆಗಿದ್ದು, ಇವರಿಗೆ ಗಿರಿಯಮ್ಮ ಎಂಬ ಹೆಂಡತಿ ಇದ್ದು, ಇವರಿಗೆ 1 ನೇ ಕೆಂಚಪ್ಪ, 2 ನೇ ಶ್ರೀನಿವಾಸ, 3 ನೇ ಆರ್.ರಾಮಯ್ಯ ಎಂಬ ಗಂಡು ಮಕ್ಕಳು ಇರುತ್ತಾರೆ. ಇವರುಗಳಲ್ಲಿ 1 ನೇ ಕೆಂಚಪ್ಪ ಮೃತಪಟ್ಟಿದ್ದು, ಇವರಿಗೆ ಲಕ್ಷ್ಮಮ್ಮ ಎಂಬ ಹೆಂಡತಿ ಇದ್ದು, ಇವರಿಗೆ

ಶಿವಕುಮಾರ.ಕೆ ಮತ್ತು ಮಂಜುನಾಥ.ಕೆ ಎಂಬ ಮಕ್ಕಳು ಇರುತ್ತಾರೆ. ಇವರುಗಳಲ್ಲಿ ಆರ್.ರಾಮಯ್ಯ ಈ ದಾವೆಯ ವಾದಿಯಾಗಿದ್ದು, ಸದರಿ ಕೆಂಚಪ್ಪ ನವರ ಹೆಂಡತಿ ಲಕ್ಷ್ಮಮ್ಮ ಮತ್ತು ಇವರ ಮಗ ಶ್ರೀನಿವಾಸ ಮತ್ತು ರಂಗಸ್ವಾಮಯ್ಯ ಉ: ಮರುಡಪ್ಪ ನವರ 2 ನೇ ಮಗನಾದ ಶ್ರೀನಿವಾಸ್ 1 ರಿಂದ 4 ನೇ ಪ್ರತಿವಾದಿಗಳಾಗಿರುತ್ತಾರೆ, 5 ನೇ ಪ್ರತಿವಾದಿ ವಾದಿಗೆ ಅಪರಿಚಿತ ವ್ಯಕ್ತಿಯಾಗಿರುತ್ತಾರೆ. ವಾದಿಯು ಮುಂದುವರೆದು ಹೇಳುವುದೇನೆಂದರೆ, ಸದರಿ ದಾವಾ ಸ್ವತ್ತಿಗೆ ಈ ದಾವೆಯ ವಾದಿ ಮತ್ತು ಪ್ರತಿವಾದಿ 1 ರಿಂದ 4 ರವರು ಮಾಲೀಕರು ಹಾಗೂ ಹಕ್ಕುದಾರರಾಗಿದ್ದು, ಸದರಿ ದಾವಾ ಸ್ವತ್ತು ವಾದಿ ಮತ್ತು ಪ್ರತಿವಾದಿ ಸಂಖ್ಯೆ.1 ರಿಂದ 4 ರವರ ಪಿತ್ರಾರ್ಜಿತ ಆಸ್ತಿಯಾಗಿದ್ದು, ಸದರಿಯವರುಗಳೆ ಸ್ವಂತ ಸ್ವಾಧೀನಾನುಭವದಲ್ಲಿರುತ್ತಾರೆ.

3. ವಾದಿಯು ಮುಂದುವರೆದು ಹೇಳುವುದೇನೆಂದರೆ, ಹೀಗಿರುವಲ್ಲಿ ಸದರಿ ದಾವಾ ಸ್ವತ್ತು ಈ ದಾವೆಯ ವಾದಿ ಮತ್ತು ಪ್ರತಿವಾದಿ ಸಂಖ್ಯೆ.1 ರಿಂದ 4 ರವರ ಕುಟುಂಬದ ಮೂಲ ಕರ್ತ ರಂಗಸ್ವಾಮಯ್ಯ ಉ: ಮರುಡಪ್ಪರವರಿಗೆ ಸೇರಿದ್ದು, ಸದರಿ ದಾವಾ ಸ್ವತ್ತನ್ನು ವಾದಿಗೆ ತಿಳಿಯದಂತೆ ಸದರಿ ವಾದಿ ಕುಟುಂಬದ ಮೂಲ ಕರ್ತ ರಂಗಸ್ವಾಮಯ್ಯ ಉ: ಮರುಡಪ್ಪ ಹಾಗೂ ಇವರ ಮಗನಾದ ಕೆಂಚಪ್ಪ ಮತ್ತು ಶ್ರೀನಿವಾಸ ಎಂಬುವವರು ದಾವಾ ಸ್ವತ್ತನ್ನು ದಿನಾಂಕ:30.07.1998 ರಂದು 5 ನೇ ಪ್ರತಿವಾದಿಗೆ ಮೋಸದಿಂದ ಮಾರಾಟ

ಮಾಡಿರುತ್ತಾರೆ. ಸದರಿ ವಾದಿಗೆ 1998ನೇ ಇಸವಿಯಲ್ಲಿ 20 ವರ್ಷ ವಯಸ್ಸಾಗಿದ್ದು, ಸದರಿ ವಾದಿಯು ಪ್ರಾಪ್ತ ವಯಸ್ಕರಾಗಿದ್ದರು ಸದರಿ ವಿಷಯವನ್ನು ಮಾರೆಮಾಚಿ ವಾದಿಯ ತಂದೆ ಮತ್ತು ಅವರ ಅಣ್ಣ-ತಮ್ಮಂದಿರು ವಾದಿಗೆ ತಿಳಿಯದಂತೆ ದಾವಾ ಸ್ವತ್ತನ್ನು ಮೋಸದಿಂದ 5ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು, ಇದು ಕಾನೂನು ಬಾಹಿರವಾಗಿರುತ್ತದೆ. ವಾದಿಯು ಮುಂದುವರೆದು ಹೇಳುವುದೇನೆಂದರೆ, ಹೀಗಿರುವಲ್ಲಿ ವಾದಿ ಮತ್ತು ಪ್ರತಿವಾದಿಗಳಿಗೆ ಸೇರಿದ ದಾವಾ ಸ್ವತ್ತುಗಳನ್ನು ವಾದಿ ಮತ್ತು ಪ್ರತಿವಾದಿ ಸಂಖ್ಯೆ. 1ರಿಂದ 4 ರವರು ದಿನಾಂಕ: 02.11.2021 ರಂದು ಪಂಚಾಯಿತಿ ಪಾರಿಕತ್ ವಿಭಾಗ ಮಾಡಿಕೊಳ್ಳುವ ಸಮಯದಲ್ಲಿ ಸಂಪೂರ್ಣ ವಾದಿ ಕುಟುಂಬಕ್ಕೆ ಸೇರಿದ ಸ್ವತ್ತುಗಳ ಖಾತಾ ಪಹಣಿಗಳನ್ನು ಪಡೆದು ಪರಿಶೀಲಿಸಿದಾಗ ಸ್ವತ್ತನ್ನು ವಾದಿಯ ತಂದೆ ಮತ್ತು ಅವರ ಅಣ್ಣ-ತಮ್ಮಂದಿರು ಮೋಸದಿಂದ ಮಾರಾಟ ಮಾಡಿರುವ ವಿಷಯವನ್ನು ವಾದಿಯು ಅರಿತ ಕೊಡಲೇ ಸದರಿ ವಾದಿಯು ಪ್ರತಿವಾದಿಗಳ ಬಳಿ ಹೋಗಿ ಏಕೆ ನೀವು ಸದರಿ ದಾವಾ ಸ್ವತ್ತನ್ನು ತಾನು ಪ್ರಾಪ್ತ ವಯಸ್ಕನಾಗಿರುವುದನ್ನು ಅರಿತುಕೊಂಡು ಸಹ ಸದರಿ ದಾವಾ ಸ್ವತ್ತನ್ನು ತನಗೆ ತಿಳಿಯದಂತೆ 5ನೇ ಪ್ರತಿವಾದಿಗೆ ಮೋಸದಿಂದ ಮಾರಾಟ ಮಾಡಿರುತ್ತೀರಿ ಈ ರೀತಿ ಮಾರಾಟ ಮಾಡಿರುವುದು ಸರಿಯಲ್ಲ, ತನ್ನ ಭಾಗವನ್ನು ತನಗೆ ಕೊಟ್ಟು ನೀವು ಏನೂಬೇಕಾದರೂ ಮಾಡಿಕೊಳ್ಳಿ ಎಂದು ತಿಳಿಸಿದ್ದರೂ, ಆದರೆ ಸದರಿ ಪ್ರತಿವಾದಿಗಳು ವಾದಿಯ ಮಾತಿಗೆ ಯಾವುದೇ ಬೆಲೆಯನ್ನು ನೀಡದೆ ಸದರಿ

ವಾದಿಯ ಭಾಗವನ್ನು ನೀಡಲು ನಿರಾಕರಿಸಿದಾಗ ಕೂಡಲೇ ಸದರಿ ವಾದಿಯು ಈ ವಿಷಯಕ್ಕೆ ಸಂಬಂಧಪಟ್ಟಂತೆ ಊರಿನಲ್ಲಿ ನ್ಯಾಯ ಪಂಚಾಯಿತಿ ಮಾಡಿಸಿದ್ದರೂ ಸಹ ಸದರಿ ಪಂಚಾಯಿತಿ ಮಾತಿಗೂ ಸಹ ಬೆಲೆಯನ್ನು ನೀಡದೇ ಸದರಿ ವಾದಿಗೆ ಭಾಗವನ್ನು ನೀಡಲು ನಿರಾಕರಿಸಿರುವುದರಿಂದ ಸದರಿ ವಾದಿಯು ದಾವೆಯನ್ನು ಭಾಗದ ಭಾಗಾಂಶಕ್ಕಾಗಿ ಸಲ್ಲಿಸಿರುತ್ತಾರೆ. ಈಗ ಸದರಿ ಪ್ರತಿವಾದಿಗಳು ದಾವಾ ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡಿದರೆ ವಾದಿಗೆ ತುಂಬಲಾರದ ಕಷ್ಟ-ನಷ್ಟ ಉಂಟಾಗಿ, ಬಹು ವಿಧಧ ವ್ಯಾಜ್ಯಗಳಿಗೆ ಕಾರಣವಾಗುತ್ತದೆ. ಈ ಅರ್ಜಿಯನ್ನು ಪುರಸ್ಕರಿಸಿದರೆ ಪ್ರತಿವಾದಿಗಳಿಗೆ ತೊಂದರೆ ಉಂಟಾಗುವುದಿಲ್ಲ. ಒಂದುವೇಳೆ ಈ ಅರ್ಜಿಯನ್ನು ತಿರಸ್ಕಲಿಸಿದರೆ ನಮಗೆ ತುಂಬಲಾರದ ಕಷ್ಟನಷ್ಟ ಉಂಟಾಗುತ್ತದೆ. ಆದ್ದರಿಂದ ಅರ್ಜಿಗಳನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

4. ಪ್ರತಿವಾದಿಗಳಿಗೆ ಸಮನ್ಸ ಜಾರಿಯಾಗಿದ್ದು, ಪ್ರತಿವಾದಿ ಸಂಖ್ಯೆ.5 ರವರು ತಮ್ಮ ವಕೀಲರ ಮುಖಾಂತರ ನ್ಯಾಯಲಯಕ್ಕೆ ಹಾಜರಾಗಿದ್ದು, ಪ್ರತಿವಾದಿ ಸಂಖ್ಯೆ.5 ರವರು ನ್ಯಾಯಾಲಯದ ಮುಂದೆ ಜ್ಞಾಪನವನ್ನು ಸಲ್ಲಿಸಿ ಅವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಸದರಿ ಮಧ್ಯಂತರ ಅರ್ಜಿ-1 ಕ್ಕೆ ತಕರಾನ್ನಾಗಿ ಪರಿಗಣಿಸಬೇಕೆಂದು ಕೇಳಿಕೊಂಡಿರುತ್ತಾರೆ.

5. ಪ್ರತಿವಾದಿ ಸಂಖ್ಯೆ.5 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ವಾದಿಯು ಸಲ್ಲಿಸಿರುವ ಮಧ್ಯಂತರ ಅಜಿರ್ಯು ಕಾನೂನಡಿಯಲ್ಲಿ ಊರ್ಜಿತಗೊಳುವುದಿಲ್ಲ. ಮುಂದುವರೆದು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ವಾದಿಯವರು ತಂದಿರುವ ಈ ದಾವೆಯ ಆಸ್ತಿಯನ್ನು ದಿನಾಂಕ:30-07-1998 ರಂದು ಈ ಪ್ರತಿವಾದಿಯು ನೋಂದಣಿಯಾದ ಶುದ್ಧ ಕ್ರಯ ಪತ್ರದಂತೆ ಆದಾಗ ಈ ದಾವೆಯ ವಾದಿಯು ಹುಟ್ಟಿದ್ದರು ಅಥವಾ ಇಲ್ಲವೇ ಎಂಬುದು ಈ ಪ್ರತಿವಾದಿಗೆ ತಿಳಿದಿರುವುದಿಲ್ಲ. ಮುಂದುವರೆದು, ಈ ಪ್ರತಿವಾದಿಯವರಿಗೆ ದಿನಾಕ:30.07.1998 ರಲ್ಲಿ ಆದ ಕ್ರಯ ಸ್ವತ್ತಿನ ಷೆಡ್ಯೂಲ್ ವಿವರ ಕ್ರಯ ಪತ್ರದಲ್ಲಿ ನೋಂದಣಿಯಾದಂತೆ ಈ ಮುಂದಿನಂತೆ ಇರುತ್ತದೆ ಮೇಲ್ಕಂಡ ಖರೀದಿಗೆ ಈ 5 ನೇ ಪ್ರತಿವಾದಿ ಪಡೆದ ಸ್ವತ್ತು ಪೂರ್ವದಲ್ಲಿ ಬಿಲ್ಲಕೆಂಪನಹಳ್ಳಿ ಗ್ರಾಮದ ಸರ್ವೆ ನಂಬರ್:28/10 ಆಗಿದ್ದು, 5 ನೇ ಪ್ರತಿವಾದಿಗೆ ಆದ ಮ್ಯುಟೇಷನ್ ಎಂ.ಆರ್.ನಂ.24/98-99, ಪಹಣಿ 2010-201 ಕ್ಕೆ 28/10 ಎ ಅದರಲ್ಲಿ ಬೇರೆ ವಿಸ್ತೀರ್ಣ 5 ನೇ ಪ್ರತಿವಾದಿಯ 00-17 ಗುಂಟೆ ಮತ್ತು ಬೇರೆ ವಿಸ್ತೀರ್ಣ ಬಿ.ವಿ.ಗೌಡ ಬಿನ್ ಬೋರೇಗೌಡ ಅವರಿಗೆ ಸೇರಿದ 00-17 ಗುಂಟೆ ಇದ್ದು, ಅವರಿಗೆ 05.07.2005 ಕ್ರಯ ಆಗಿದ್ದು, ಎಂ.ಆರ್.ನಂ.54/2004-2005 ರಲ್ಲಿ ಕಂದಾಯ ದಾಖಲೆಗಳಲ್ಲಿ ದಾಖಲಾಗಿರುತ್ತದೆ. ಆದರೆ ಬಿ.ಬಿ.ಗೌಡ ಕ್ರಯದಾರರಾದ ಅವರನ್ನು ಈ ದಾವೆಗೆ ಪಕ್ಷಕಾರರಾಗಿ ಮಾಡಿರುವುದಿಲ್ಲ.

6. ಮುಂದುವರೆದು ಪ್ರತಿವಾದಿ ಸಂಖ್ಯೆ.5 ರವರು ಹೇಳುವುದೇನೆಂದರೆ, ವಾದಿಯು ದಾವೆಯನ್ನು ಹಾಜರುಪಡಿಸಿದಾಗ 46 ವರ್ಷ ಆಗಿದೆ ಎಂದು ದಾವಾ ಶೀರ್ಷಿಕೆಯಲ್ಲಿ ಹೇಳಿದ್ದಾರೆ ಅಂದ ಮೇಲೆ ಈ ಪ್ರಸ್ತುತ ದಾವೆಯು ಕಾಲ ವಿಳಂಬ ಕಾಯಿದೆ ಮತ್ತು 110 ರಡಿಯಲ್ಲಿ 1963 ವಿಧಿ 27 ಪರಿಚ್ಛೇದ 109 ಮತ್ತು 110 ರಡಿಯಲ್ಲಿ ವಾದಿಯವರ ದಾವೆಯು ಊರ್ಜಿತವಾಗತಕ್ಕದ್ದಲ್ಲವಾಗಿರುತ್ತದೆ. ಮುಂದುವರೆದು, ವಾದಿಯವರು 5 ನೇ ಪ್ರತಿವಾದಿಯ ದಿನಾಂಕ:30.07.1998 ರ ಕ್ರಯ ಪತ್ರವನ್ನು ಪ್ರಶ್ನೆ ಮಾಡಿರುವುದಿಲ್ಲ ಮತ್ತು ದಾವೆ ವಿಭಾಗ ಮತ್ತು ಪ್ರತ್ಯೇಕ ಹಿಸ್ಸೆಗೆ ಊರ್ಜಿತವಾಗತಕ್ಕದ್ದಲ್ಲ. ಅವರು ದಾವೆಯನ್ನು ನಿಗಧಿತ ಸಮಯದ ಒಳಗಡೆ ತಂದಿಲ್ಲವಾದುದ್ದರಿಂದ ಅವರ ದಾವೆಯನ್ನು ಹಕ್ಕು ಮತ್ತು ಸ್ವಾಧೀನಾನುಭವಕ್ಕೆ ಪ್ರತ್ಯೇಕ ದಾವೆಯನ್ನು ಸಲ್ಲಿಸದೇ ಹಾಗೂ ದಿನಾಂಕ: 30-07-1998 ರ ಕ್ರಯ ಪತ್ರವನ್ನು ರದ್ದುಪಡಿಸಲು ಕೋರಿಲ್ಲವಾದ ಕಾರಣ ಅದೇ ಕಾಯಿದೆ ವಿಧಿ 58 ಮತ್ತು 59 ರಡಿಯಲ್ಲಿ ಸಹ ಈ ದಾವೆ ಊರ್ಜಿತವಾಗತಕ್ಕದ್ದಲ್ಲವಾಗಿರುತ್ತದೆ. ಮುಂದುವರೆದು ಮೂಲ ಸರ್ವೆ ನಂಬರ್: 28/10 ಅದು 28/10 ಎಮತ್ತು 10 ಬಿ ಹಾಗೂ ಸರ್ವೆ ನಂಬರ್:28/10 ಎ 1 ಮತ್ತು 28/10 ಎ 2 ಪೋಡಿಯಾಗಿದ್ದು, ಇತರರಿಗೂ ಸಹ ಪೋಡಿಯಾಗಿದ್ದು, ಪೋಡಿ ಹಾಗೂ ಕಂದಾಯ ದಾಖಲೆಗಳನ್ನು ಗೊತ್ತಿದ್ದರೂ

ಸಹ ಪ್ರಶ್ನಿಸಿರುವುದಿಲ್ಲ. ಆದ್ದರಿಂದ ಸದರಿ ಪ್ರತಿವಾದಿ ಸಂಖ್ಯೆ.5 ರವರು ಈ ದಾವೆಯನ್ನು ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

7. ವಾದಿರ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

8. ಈ ಕೆಳಗಿನ ಅಂಶಗಳು ನ್ಯಾಯಾಲಯದ ಪರ್ಯಾಲೋಚನೆಗೆ ಉದ್ಭವಿಸುತ್ತವೆ:

**1.** ವಾದಿ/ಅರ್ಜಿದಾರರು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವಂತಹ ಮೇಲ್ನೋಟದ ಪ್ರಕರಣವಿರುವುದನ್ನು ರುಜುವಾತು ಪಡಿಸಿದ್ದಾರೆಯೇ?

**2.** ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಿದಲ್ಲಿ/ನೀಡದೇ ಇದ್ದಲ್ಲಿ ವಾದಿಗೆ ಅತೀ ಹೆಚ್ಚಿನ ತೊಂದರೆ ಉಂಟಾಗುತ್ತದೆಯೇ?

**3.** ಅನುಕೂಲತೆಯ ತಕ್ಕಡಿ ಯಾರ ಪರವಾಗಿರುತ್ತದೆ?

**4.** ಏನು ಆದೇಶ?

9. ಈ ಮೇಲಿನ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನನ್ನ ಉತ್ತರಗಳು ಈ ಕೆಳಗಿನಂತಿವೆ:

ಅಂಶ 1 ಃ ನಕರಾತ್ಮಕ;

ಅಂಶ 2 ಃ ನಕರಾತ್ಮಕ;

ಅಂಶ 3 ಃ ನಕರಾತ್ಮಕ;

ಅಂಶ 4 ಃ ಅಂತಿಮ ಆದೇಶದಂತೆಃ

ಕಾರಣಗಳು

10. <u>ಅಂಶ**-1:**</u> ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ದಾವಾ ಸ್ವತ್ತಿನಲ್ಲಿ ಭಾಗಾಂಶ, ಸ್ವಾಧಿನತೆ ಮತ್ತು ಇತರೆ ಪರಿಹಾರ ಕೋರಿ ದಾವೆ ಸಲ್ಲಿಸಿರುತ್ತಾರೆ. ಸದರಿ ದಾವಾ ಸ್ವತ್ತಿಗೆ ಈ ದಾವೆಯ ವಾದಿ ಮತ್ತು ಪ್ರತಿವಾದಿ 1 ರಿಂದ 4 ರವರು ಮಾಲೀಕರು ಹಾಗೂ ಹಕ್ಕುದಾರರಾಗಿದ್ದು, ಸದರಿ ದಾವಾ ಸ್ವತ್ತು ವಾದಿ ಮತ್ತು ಪ್ರತಿವಾದಿ ಸಂಖ್ಯೆ.1 ರಿಂದ 4 ರವರ ಪಿತ್ರಾರ್ಜಿತ ಆಸ್ತಿಯಾಗಿದ್ದು, ಸದರಿಯವರುಗಳ ಸ್ವಂತ ಸ್ವಾಧೀನಾನುಭವದಲ್ಲಿರುತ್ತಾರೆ. ಹೀಗಿರುವಲ್ಲಿ ಸದರಿ ಈ ದಾವೆಯ ವಾದಿ ಮತ್ತು ಪ್ರತಿವಾದಿ ಸಂಖ್ಯೆ.1 ರಿಂದ 4 ರವರ ಕುಟುಂಬದ ಮೂಲ ಕರ್ತ ರಂಗಸ್ವಾಮಯ್ಯ ಉ: ಮರುಡಪ್ಪರವರಿಗೆ ಸೇರಿದ್ದು, ಸದರಿ ದಾವಾ ಸ್ವತ್ತನ್ನು ವಾದಿಗೆ ತಿಳಿಯದಂತೆ ಸದರಿ ವಾದಿ ಕುಟುಂಬದ ಮೂಲ ಕರ್ತ ರಂಗಸ್ವಾಮಯ್ಯ ಉ: ಮರುಡಪ್ಪ ಹಾಗೂ ಇವರ ಮಗನಾದ ಕೆಂಚಪ್ಪ ಮತ್ತು ಶ್ರೀನಿವಾಸ ಎಂಬುವವರು ದಾವಾ ಸ್ವತ್ತನ್ನು ದಿನಾಂಕ:30.07.1998 ರಂದು 5ನೇ ಪ್ರತಿವಾದಿಗೆ ಮೋಸದಿಂದ ಮಾರಾಟ ಮಾಡಿರುತ್ತಾರೆ. ಸದರಿ ವಾದಿಗೆ 1998ನೇ ಇಸವಿಯಲ್ಲಿ 20 ವರ್ಷ ವಯಸ್ಸಾಗಿದ್ದು, ಸದರಿ ವಾದಿಯು ಪ್ರಾಪ್ತ ವಯಸ್ಕರಾಗಿದ್ದರು ಸದರಿ ವಿಷಯವನ್ನು ಮಾರೆಮಾಚಿ ವಾದಿಯ ತಂದೆ ಮತ್ತು ಅವರ ಅಣ್ಣ-ತಮ್ಮಂದಿರು ವಾದಿಗೆ ತಿಳಿಯದಂತೆ ದಾವಾ ಸ್ವತ್ತನ್ನು ಮೋಸದಿಂದ 5ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು, ಇದು ಕಾನೂನು ಬಾಹಿರವಾಗಿರುತ್ತದೆ. ಸದರಿ ದಾವಾ ಸ್ವತ್ತನ್ನು ತನಗೆ ತಿಳಿಯದಂತೆ 5ನೇ

ಪ್ರತಿವಾದಿಗೆ ಮೋಸದಿಂದ ಮಾರಾಟ ಮಾಡಿರುತ್ತೀರಿ ಈ ರೀತಿ ಮಾರಾಟ ಮಾಡಿರುವುದು ಸರಿಯಲ್ಲ, ತನ್ನ ಭಾಗವನ್ನು ತನಗೆ ಕೊಟ್ಟು ನೀವು ಏನೂಬೇಕಾದರೂ ಮಾಡಿಕೊಳ್ಳಿ ಎಂದು ತಿಳಿಸಿದ್ದರೂ ಆದರೆ ಸದರಿ ಪ್ರತಿವಾದಿಗಳು ವಾದಿಯ ಮಾತಿಗೆ ಯಾವುದೇ ಬೆಲೆಯನ್ನು ನೀಡದೆ ಸದರಿ ವಾದಿಯ ಭಾಗವನ್ನು ನೀಡಲು ನಿರಾಕರಿಸಿರುತ್ತಾರೆ ಈ ಹಂತದಲ್ಲಿ ಸದರಿ ಪ್ರತಿವಾದಿಗಳು ದಾವಾ ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡಿದರೆ ವಾದಿಗೆ ತುಂಬಲಾರದ ಕಷ್ಟ-ನಷ್ಟ ಉಂಟಾಗಿ, ಬಹು ವಿಧಧ ವ್ಯಾಜ್ಯಗಳಿಗೆ ಕಾರಣವಾಗುತ್ತದೆ. ಆದ್ದರಿಂದ ಅರ್ಜಿಗಳನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

11. ತದ್ವಿರುದ್ದವಾಗಿ, ಪ್ರತಿವಾದಿ ಸಂಖ್ಯೆ.5 ರವರು ನ್ಯಾಯಾಲಯದ ಮುಂದೆ ಜ್ಞಾಪನವನ್ನು ಸಲ್ಲಿಸಿ ಸದರಿಯವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಸದರಿ ಮಧ್ಯಂತರ ಅರ್ಜಿ-1 ಕ್ಕೆ ತಕರಾನ್ನಾಗಿ ಪರಿಗಣಿಸಬೇಕೆಂದು ಕೇಳಿಕೊಂಡಿರುತ್ತಾರೆ. ಸದರಿ ಲಿಖಿತ ಹೇಳಿಕೆಯಲ್ಲಿ ವಾದಿಯು ಸಲ್ಲಿಸಿರುವ ಮಧ್ಯಂತರ ಅಜಿರ್ಯು ಕಾನೂನಡಿಯಲ್ಲಿ ಊರ್ಜಿತಗೊಳುವುದಿಲ್ಲ. ಸದರಿ ಸ್ವತ್ತು ಒಟ್ಟು ಕುಟುಂಬ ಆಸ್ತಿಗಳು ಎನ್ನುದನ್ನು ನಿರಾಕರಿಸಿದ್ದು, ಸದರಿ ರಂಗಸ್ವಾಮಯ್ಯ ಉಃ ಮರಡಪ್ಪ ಮತ್ತು ಅವರ ಮಕ್ಕಳಿಂದ ಸದರಿ ದಾವಾ ಸ್ವತ್ತನ್ನು ನೋಂದಾಯಿತ ಕ್ರಯಪತ್ರದ ದಿನಾಂಕಃ30.07.1998 ಖರೀದಿ

ಮಾಡಿದ್ದು, ತಾನು ಕಾನೂನುಬದ್ದ ಖರೀದಿದಾರನಾಗಿದ್ದು, ಕಂದಾಯ ದಾಖಲಾತಿಗಳು ತನ್ನ ಹೆಸರಿಗೆ ಬದಲಾವಣೆಗೊಂಡು ತಾನು ಮಾಲೀಕ ಮತ್ತು ಸ್ವಾಧೀನಾನುಭವದಲ್ಲಿದ್ದು, ವಾದಿಗೆ ಯಾವುದೇ ಹಕ್ಕು ಇರುವುದಿದ್ದರೂ ಸಹ ಈ ಹಂತದಲ್ಲಿ ತೊಂದರೆ ಕೊಡುವ ಉದ್ದೇಶದಿಂದ ಪ್ರಸುತ್ತ ದಾವೆಯನ್ನು ಹೂಡಿರುತ್ತಾರೆಂದು ಸದರಿ ಮಧ್ಯಂತರ ಅರ್ಜಿಯನ್ನು ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

12. ವಾದಿಗಳು ಮತ್ತು ಪ್ರತಿವಾದಿಗಳು ಹಾಜರುಪಡಿಸಿದ ನೆರಳಚ್ಚು ಪ್ರತಿಗಳ ದಾಖಲೆಗಳನ್ನು ಪರಿಶೀಲಿಸಲಾಗಿ ಸದರಿ ವಾದಿ ಮತ್ತು ಪ್ರತಿವಾದಿ ಸಂಖೆ.1 ರಿಂದ 4 ರವರುಗಳು ಒಟ್ಟು ಕುಟುಂಬ ಸದಸ್ಯರು ಎಂದು ಕಂಡುಬಂದಿದ್ದು, ಕ್ರಯಪತ್ರದ ದಿನಾಂಕಃ30.07.1998 ನ್ನು ಪರಿಶೀಲಿಸಿದ್ದು, ಸದರಿ ಕ್ರಯಪತ್ರದಲ್ಲಿ ಈ ದಾವೆಯ ದಾವಾ ಸ್ವತ್ತನ್ನು ಪ್ರತಿವಾದಿ ಸಂಖ್ಯೆ.5 ಡಿ.ನಾಗರಾಜು ರವರು ಈ ದಾವೆಯ ಪ್ರತಿವಾದಿ ಸಂಖ್ಯೆ.1 ರವರ ಗಂಡ ಮತ್ತು ಪ್ರತಿವಾದಿ ಸಂಖ್ಯೆ.2 ರಿಂದ 3 ರವರ ತಂದೆಯಾದ ಲೇಟ್ ಕೆಂಚಪ್ಪ ಮತ್ತು ಪ್ರತಿವಾದಿ ಸಂಖ್ಯೆ.4 ರವರುಗಳು ಇವರ ತಂದೆಯಾದ ರಂಗಸ್ವಾಮಯ್ಯ ಉಃ ಮರಡಯ್ಯರವರ ಜಂಟೀಯಾಗಿ ಸದರಿ ಪ್ರತಿವಾದಿ ಸಂಖ್ಯೆ.5 ರವರಿಗೆ ಮಾರಾಟ ಮಾಡಿರುವುದು ಕಂಡುಬಂದಿರುತ್ತದೆ. ಮುಂದುವರೆದು, ಪಹಣಿ ಪತ್ರಿಕೆಗಳು ಮತ್ತು ಹಕ್ಕು ಬದಲಾವಣೆ ಪತ್ರಗಳನ್ನು ಪರಿಶೀಲಿಸಿದ್ದು, ಸದರಿ ಸ್ವತ್ತು

ಕ್ರಯವಾದ ನಂತರ ಸದರಿ ಪ್ರತಿವಾದಿ ಸಂಖ್ಯೆ.5 ರವರ ಹೆಸರಿಗೆ ಬದಲಾವಣೆಗೊಂಡಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಮುಂದುವರೆದು, ನೆರಳಚ್ಚು ವರ್ಗಾವಣೆ ಪ್ರಮಾಣ ಪತ್ರವನ್ನು ಪರಿಶೀಲಿಸಿದ್ದು, ಅದರಲ್ಲಿ ಸದರಿ ವಾದಿಯ ತಂದೆಯ ಹೆಸರು ರಂಗಸ್ವಾಮಯ್ಯ ಊಃ ಮರುಡಪ್ಪ ಎಂಬುದು ಮತ್ತು ವಾದಿಯು ದಿನಾಂಕಃ20.04.1978 ರಲ್ಲಿ ಜನಿಸಿರುತ್ತಾರೆಂಬುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಮುಂದುವರೆದು, ವಾದಿ ಮತ್ತು ಪ್ರತಿವಾದಿ ಸಂಖ್ಯೆ.5 ರವರು ಹಾಜರಪಡಿಸಿದ ದಾಖಲೆಗಳನ್ನು ಗಮನಿಸಿದಾಗ ಸದರಿ ದಾವಾಸ್ತಿಯು ಪ್ರತಿವಾದಿ ಸಂಖ್ಯೆ.5 ರವರಿಗೆ ಕ್ರಯ ಪತ್ರದ ಮೂಲಕ ಬಂದಿರುವುದು ಕಂಡುಬಂದಿದ್ದು, ಈ ಹಂತದಲ್ಲಿ ಸದರಿ ದಾವಾ ಆಸ್ತಿಯು ಪ್ರತಿವಾದಿ ಸಂಖ್ಯೆ.5 ರವರ ಸ್ವತ್ತಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಈ ಅಂಶದಿಂದ ಮೇಲ್ನೋಟದ ನ್ಯಾಯಾಧೀಕರಣ (prima facie) ವಾದಿಯ ಪರವಾಗಿ ಇಲ್ಲದೇ ಇರುವುದು ಕಂಡುಬಂದಿರುತ್ತದೆ.

13. *ಮಾನ್ಯ ಸರ್ವೋಚ್ಚ ನ್ಯಾಯಾಲಯ* ***(1995) 5 Supreme Court Cases 545 between Gujarat Bottling Co.LTD. And others V/s Coca Coal Co. And other*** *ಪ್ರಕರಣದಲ್ಲಿ*

> ***“Specific relief act 1963-s.42-Injunction enforcing negative stipulation in contract- Discretion of court- When can injunction be refused.***
>
> ***“Held: The grant of an interlocutory injunction during the pendency of legal proceedings is a matter requiring the***

***exercise of discretion of the court. While exercising the discretion the court applies the following tests-(i)Whether the plaintiff has a prima facie case: (II) Whether the balance of convenience is in favour of the plaintiff; and (iii)Whether the plaintiff would suffer an irreparable injury if his prayer for interlocutory injunction is disallowed. The decision whether or not to grant an interlocutory injunction has to be taken at a time when the existence of the legal right assailed by the plaintiff and its alleged violation are both contested and uncertain and remain uncertain till they are established at the trail on evidence. Relief by way of interlocutory injunction is granted to mitigate the risk of injustice to the plaintiff during the period before that uncertainty could be resolved. The object of the interlocutory injunction is to protect the plaintiff against injury by violation of his right for which he could not be adequately compensated in damages recoverable in the action if the uncertainty were resolved in his favour at trial. The need for such protection has however, to be weighed against the corresponding need of the defendant to be protected against injury resulting from his having been prevented from exercising his own legal rights for which he could not be adequately compensated. The court must weigh one need against another and determine where the "balance of convenience" lies. In order to protect the defendant while granting an interlocutory injunction in his favour the court can require the plaintiff to furnish an undertaking so that the defendant can be adequately compensated if the uncertainty were resolved in his favour at the trial"*** *ಎಂದು ತಿಳಿಸಿರುತ್ತದೆ.*

14. ಈ ಮೇಲೆ ಮಾನ್ಯ *ಸರ್ವೋಚ್ಚ* ನ್ಯಾಯಾಲಯವು ತಿಳಿಸಿರುವಂತೆ ತಾತ್ಕಾಲೀಕ ತಡೆಯಾಜ್ಞೆ ಕೋರಿ ಅರ್ಜಿ ಸಲ್ಲಿಸಿದಾಗ ಸದರಿ ಪ್ರಕರಣವನ್ನು ತೀರ್ಮಾನ ಮಾಡುವಾಗ ಮೇಲ್ನೋಟದ ನ್ಯಾಯಾಧೀಕರಣ ಯಾರ ಪರವಾಗಿ ಇದೆ ಎಂಬುವುದನ್ನು ಹಾಗೂ ವಾದಿಯ ಪರ ವಿಚಾರಣೆ ಆಗುವ ಎಲ್ಲಾ ಅಂಶಗಳು ವಾದಿಯ ದಾವೆಯಲ್ಲಿ ಇದೆ ಎಂಬುವುದನ್ನು ಗಮನಿಸಬೇಕೆಂದು ಸ್ಪಷ್ಟವಾಗಿ ತಿಳಿಸಿರುತ್ತದೆ. ಅಲ್ಲದೇ ಅನುಕೂಲದ ತಕ್ಕಡಿ (balance of connivance) ಯಾವ ಪಕ್ಷಗಾರರ ಪರವಾಗಿ ಇರುತ್ತದೆ. ಒಂದು ವೇಳೆ ತಾತ್ಕಾಲೀಕ ತಡೆಯಾಜ್ಞೆ ನೀಡಿದರೆ ಯಾವ ಪಕ್ಷಗಾರರಿಗೆ ಹೆಚ್ಚಿನ ತೊಂದರೆ ಉಂಟಾಗುತ್ತದೆ ಎಂಬುವುದನ್ನು ಸ್ಪಷ್ಟವಾಗಿ ಗಮನಿಸಬೇಕು ಎಂದು ತಿಳಿಸಿರುತ್ತದೆ. ಈ ಮೇಲೆ ತಿಳಿಸಿರುವಂತೆ ಪ್ರಸ್ತುತವಾಗಿ ಮೇಲ್ನೋಟದ ನ್ಯಾಯಾಧೀಕರಣ ವಾದಿಯ ಪರವಾಗಿ ಇಲ್ಲದೇ ಇರುವುದು ಸ್ಪಷ್ಟವಾಗಿ ತಿಳಿದು ಬಂದಿರುತ್ತದೆ.

15. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ***Gowri shankara swamigalu V/s Siddaganga mutta ILR 1989 KAR 1701 that " the existence of prima facie case in the matter of granting injunction is really harbinger all the clear sing to go ahead in investigating for aspect of question for injunction if has no prima-facie case at all other case put forward was so week and tainted very title prospect of being accepted by the court, further question of***

***balance of convenience and irreparable loss need not be considered***” ಎಂದು ತಿಳಿಸಿರುತ್ತದೆ. ಅದರಂತೆ ವಾದಿ ಮತ್ತು ಪ್ರತಿವಾದಿ ಸಂಖ್ಯೆ.5 ರವರುಗಳು ಹಾಜರುಪಡಿಸಿದ ದಾಖಲೆಗಳನ್ನು ಗಮನಿಸಿದಾಗ ಮೇಲ್ನೋಟದ ನ್ಯಾಯಾಧೀಕರಣ ವಾದಿಯ ಪರವಾಗಿ ಇರುವುದಿಲ್ಲ. ಈ ಹಂತದಲ್ಲಿ ವಾದಿಯ ಪರವಾಗಿ ಮೇಲ್ನೋಟದ ನ್ಯಾಯಾಧೀಕರಣ (prima-facie) ಇರುವುದಿಲ್ಲ. ಆದ್ದರಿಂದ ಅಂಶ **1** ನ್ನು ನಕರಾತ್ಮಕ ಎಂದು ಉತ್ತರಿಸಲಾಗಿದೆ**.**

16. <u>ಅಂಶ**-2** ಮತ್ತು **3:**</u>. ಈ ಎರಡು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಒಟ್ಟಿಗೆ ಚರ್ಚೆಗೆ ತಗೆದುಕೊಳ್ಳಲಾಗಿದೆ.

ಈಗಾಗಲೇ ಮೇಲೆ ತಿಳಿಸಿರುವಂತೆ ವಾದಿಯರು ಹಾಜರು ಪಡಿಸಿರುವ ದಾಖಲೆಗಳನ್ನು ಗಮನಿಸಿದಾಗ ಸದರಿ ದಾವಾಸ್ತಿಯು ಪ್ರತಿವಾದಿ ಸಂಖ್ಯೆ.5 ರವರಿಗೆ ಕ್ರಯಪತ್ರದ ಮೂಲಕ ಬಂದಿರುವುದು ಕಂಡುಬಂದಿದ್ದು, ಈ ಹಂತದಲ್ಲಿ ಸದರಿ ದಾವಾ ಆಸ್ತಿಯು ಪ್ರತಿವಾದಿಯ ಸ್ವತ್ತಾಗಿರುವುದು ಕಂಡುಬರುತ್ತಿದ್ದು, ಪಹಣಿ ಪತ್ರಿಕೆಯಿಂದ ಮತ್ತು ಇತರ ದಾಖಲಗಳಿಂದ ದಾವಾ ಸ್ವತ್ತು ಪ್ರತಿವಾದಿ ಸಂಖ್ಯೆ.5 ರವರ ಹೆಸರಿನಲ್ಲಿ ಇರುವುದು ಕಂಡುಬಂದಿರುತ್ತದೆ. ಮುಂದುವರೆದು, ಸದರಿ ಸ್ವತ್ತಿನಲ್ಲಿ ವಾದಿಗೆ ಭಾಗದ ಪಾಲು ಇದೆ ಎಂಬ ಅಂಶವನ್ನು ನ್ಯಾಯಾಲಯದ ಮುಂದೆ ವಾದಿಯು ತನ್ನ

ವಿಚಾರಣೆಯ ಮೂಲಕ ಅವಶ್ಯಕ ದಾಖಲಾತಿಗಳ ಮೂಲಕ ರುಜುವಾತುಪಡಿಸಿದಲ್ಲಿ ವಾದಿಯು ತನ್ನ ಹಕ್ಕನ್ನು ಪಡೆಯಬಹುದಾಗಿದೆ. ಆದ್ದರಿಂದ ಈ ಹಂತದಲ್ಲಿ ವಾದಿಯ ಪರವಾಗಿ ಮೇಲ್ನೋಟದ ನ್ಯಾಯಾಧೀಕರಣ (prima-facie) ಇರುವುದಿಲ್ಲ ಎಂಬ ತೀರ್ಮಾನಕ್ಕೆ ಬಂದಿರುತ್ತದೆ. ಈ ಹಂತದಲ್ಲಿ ಅನುಕೂಲದ ತಕ್ಕಡಿ (balance of convenience) ವಾದಿಯ ಪರವಾಗಿ ಇರುವುದಿಲ್ಲ. ಒಂದು ವೇಳೆ ಅರ್ಜಿಗಳನ್ನು ಪುರಸ್ಕರಿಸಿದರೆ ಪ್ರತಿವಾದಿ ಸಂಖ್ಯೆ.5 ರವರಿಗೆ ತುಂಬಲಾರದ ನಷ್ಟ (irreparable loss) ಉಂಟಾಗುತ್ತದೆ. ಸದರಿ ನಷ್ಟವನ್ನು ವಾದಿಯು ಹಣದಿಂದ ತುಂಬಿಕೊಡಲು ಸಾಧ್ಯವಿರುವುದಿಲ್ಲ ಎಂದು ಮನಗಂಡು ಅಂಶ **2** ಮತ್ತು **3** ನ್ನು ನಕರಾತ್ಮಕ ಎಂದು ಉತ್ತರಿಸಲಾಗಿದೆ**.**

17. <u>ಅಂಶ**-4**</u> ಈ ಮೇಲೆ ವಿವರಿಸಿರುವ ಕಾರಣಗಳು ಮತ್ತು ನಾನು ಹೊಂದಿದ ಅಭಿಪ್ರಾಯಗಳಿಗಾಗಿ ಈ ಕೆಳಗಿನಂತೆ ಆದೇಶಿಸುತ್ತಿದ್ದೇನೆ.

## <u>ಆದೇಶ</u>

ವಾದಿ ಸಂಖ್ಯೆ.3 ರವರು ಸಲ್ಲಿಸಿರುವ ಮಧ್ಯಂತರ ಅರ್ಜಿ-1 ರ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2

ಸಹವಾಚಕ 151 ರ ಅರ್ಜಿನ್ನು ಖರ್ಚು ಸಹಿತ

ತಿರಸ್ಕರಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಭಾಗಶಃ ಉಕ್ತಲೇಖನ ನೀಡಿ, ಅವರು ಗಣಕೀಕೃತಗೋಳಿಸಿದ ತರ್ಜುಮೆಯನ್ನು ತಿದ್ದಿ ಸಹಿ ಮಾಡಿ ದಿನಾಂಕಃ 15 ನೇ ಏಪ್ರಿಲ್ 2024 ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ).

**(ಮಹೇಶ್ ಬಿ.ಟಿ.)**
**1** ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ರಾಮನಗರ.**